ಆ) ಹಾಗಿದ್ದಲ್ಲಿ, ಅಪ್‌ಗ್ರೇಡ್ ಮಾಡಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳು).–

ಅ) ಕೃಷ್ಣರಾಜಪುರಂ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಮನವಿ ಬಂದಿರುತ್ತದೆ.

ಆ) ಮನವಿ ಪರಿಶೀಲನೆಯಲ್ಲಿದೆ. ಮುಂದಿನ ಕ್ರಮದ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುವುದು.

ಸರ್ಕಾರಿ ಆಸ್ಪತ್ರೆಗಳ ಕಾರ್ಯದಕ್ಷತೆ ಮತ್ತು ಸ್ವಚ್ಛತೆಯ ಬಗ್ಗೆ

೯೭. **ಶ್ರೀ ಎ.ಟಿ. ರಾಮಸ್ವಾಮಿ** (ಅರಕಲಗೂಡು). —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸರ್ಕಾರದ ಆಸ್ಪತ್ರೆಗಳಲ್ಲಿ ಕಾರ್ಯದಕ್ಷತೆ ಮತ್ತು ಸ್ವಚ್ಛತೆ ಕುಂಠಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಸುಧಾರಿಸಲು ಹಾಗೂ ಸಂಪಡಿಸಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).–

ಅ) ಈ ವಿಷಯದಲ್ಲಿ ಕೆಲವು ನ್ಯೂನತೆಗಳು ಇರುವುದು ಗಮನಕ್ಕೆ ಬಂದಿದೆ.

ಆ) ಈ ನ್ಯೂನತೆಗೆಸಿಬ್ಬಂದಿಯ ಕೊರತೆ ಸಂಪನ್ಮೂಲಗಳ ಅಭಾವ ಮುಂತಾದ ಕಾರಣಗಳಿದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅರಣ್ಯಇಲಾಖೆಯಿಂದ ರೈತರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ

೯೮. **ಶ್ರೀ ಎ. ಟಿ. ರಾಮಸ್ವಾಮಿ**, (ಅರಕಲಗೂಡು). —ಮಾನ್ಯ ಅರಣ್ಯ ಮತ್ತು ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸ್ವಂತ ಅನುಭೋಗದಲ್ಲಿರುವ ಮರವೊಂದನ್ನು ಅವಶ್ಯ ಉಪಯೋಗಿಸಲು ಅರಣ್ಯ ಇಲಾಖೆಯಲ್ಲಿ ಅನುಮತಿ ದೊರಕಿಸಿಕೊಳ್ಳಲು ಬಹಳ ಕಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಇದು ನಿಜವಷ್ಟೆ. ಆದರೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ ೧೯೭೮ರ ನಿಯಮ (೮)ಉಪ ನಿಯಮ (೬)ರ ಪ್ರಕಾರ ೨೮ ಘನ ಮೀಟರ್ (ಟಿಂಬರ್) ಮತ್ತು ೫೦ ಟನ್ ಸೌದೆಯನ್ನು ಸ್ವಂತ ಉಪಯೋಗಕ್ಕಾಗಿ ಪೂರ್ವಾನುಮತಿ ಇಲ್ಲದೆ ಕಡಿಯಬಹುದು.

ಕರ್ನಾಟಕ ವೃಕ್ಷ ಸಂರಕ್ಷಣಾ ನಿಯಮಾವಳಿ ನಿಯಮ ೪ರ ಪ್ರಕಾರ ಈ ರೀತಿ ಸ್ವಂತ ಉಪಯೋಗಕ್ಕೆ ಕಡಿಯುವ ವಿಷಯವನ್ನು ಮುಂಚಿತವಾಗಿ ಮತ್ತು ಕಡಿದ ನಂತರ ವೃಕ್ಷ ಸಂರಕ್ಷಣಾಧಿಕಾರಿಯವರಿಗೆ ಬರವಣಿಗೆ ಮೂಲಕ ತಿಳಿಸಬೇಕು.

ಮೇಲೆ ಹೇಳಿದ ವಿಧಿ ವಿಧಾನ (ಅಂದರೆ) ೨೮ ಘ.ಮೀ. ಮತ್ತು ೫೦ ಟನ್ ಸೌದೆಗಿಂತ ಹೆಚ್ಚಿಗೆ ಬೇಕಾದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆಯ ಪ್ರಕಾರ ಕಡಿಯಬೇಕಾದ ಮರಗಳ ಮೇಲೆ ತಮ್ಮ ಹಕ್ಕನ್ನು ಕಂದಾಯ ಇಲಾಖೆ ದಾಖಲೆ ಆಧಾರದ ಮೇಲೆ ಪ್ರತಿಷ್ಠಿಸಿ ಪೂರ್ವಾನುಮತಿಯನ್ನು ವೃಕ್ಷ ಸಂರಕ್ಷಣಾಧಿಕಾರಿಗಳಿಂದ ಪಡೆದು ಅವರು ಒಪ್ಪಿಗೆ ಕೊಟ್ಟ ನಂತರ ಕಡಿದು ಉಪಯೋಗಿಸಬಹುದು.

ಆ) ಉದ್ಭವಿಸುವುದಿಲ್ಲ.